


...23ನೇ ಪುಟದಿಂದ

ಚಿತ್ರ: ಕೆ.ಎಸ್.ಮೋಕ್ಷೇಂದ್ರ

# ಕಮಲ್‌ಜೀ, ಮೈ ಫ್ರೆಂಡ್..!

ಇನ್ನೊಂದು ವಿಷಯ ಏನಪ್ಪಾ ಅಂದ್ರೆ, ಅವರು ಹೇಗೆ ಇದ್ದಾರೋ ಹಾಗೆಯೇ ಅವರನ್ನು ನಾವು ಒಪ್ಕೊಳ್ಳೋದು! ಫ್ರೆಂಡ್‌ಶಿಪ್‌ನಲ್ಲಿ ಇದು ಬಹಳ ದೊಡ್ಡ ವಿಷಯ. ಈ ಜಗತ್ತಿನಲ್ಲಿ ನಾವ್ಯಾರೂ ಯಾರೂ ಪರ್ಫೆಕ್ಟ್ ಅಲ್ಲ. ಎಷ್ಟೇ ದೊಡ್ಡ ನಟ ಆಗಿದ್ರೂ, ನಮ್ಮಲ್ಲಿ ಎಲ್ಲರಲ್ಲೂ ಒಂದಲ್ಲ ಒಂದು ಕೊರತೆ ಇದ್ದೇ ಇರುತ್ತೆ. ಅದನ್ನು ನಾವಿಬ್ಬರೂ ಪರಸ್ಪರ ಒಂದು ಹೋಲ್ ಪ್ಯಾಕೇಜ್ ಅನ್ನೋ ಹಾಗೆ, ಇದ್ದದ್ದನ್ನು ಇದ್ದ ಹಾಗೇ ಒಪ್ಕೊಂಡುಬಿಟ್ಟಿದ್ದೇವೆ ಅನ್ಸುತ್ತೆ.

ನಾನು 'ಉತ್ತಮ ವಿಲ್ಲನ್' ಶೂಟಿಂಗ್ ಮಾಡುತ್ತಿದ್ದಾಗಲೂ ನಾನು ಡೈರೆಕ್ಟರ್ ಆಗಿ, ಅವರು ನಟನಾಗಿ ನಮ್ಮ ನಡುವೆ ಸಣ್ಣ ಪುಟ್ಟ ಯಾವುದೇ ವಿಷಯಗಳು ಅಡ್ಡ ಬಂದರೂ ಅದನ್ನು ಪರಸ್ಪರ ಒಪ್ಕೊಂಡು ಬಿಟ್ಟಿದ್ದೀವಿ. ಶೂಟಿಂಗ್ ಶುರುವಾಗೋದಕ್ಕಿಂತ ಮೊದಲೇ ನಾವು ಇದನ್ನು ಕುಳಿತುಕೊಂಡು ನಿರ್ಧರಿಸಿಬಿಟ್ಟಿದ್ದೆವು– ನಮ್ಮ ಪರ್ಸನಲ್ ಫ್ರೆಂಡ್‌ಶಿಪ್, ಸಮಾನ ಮನಸ್ಕತೆ, ಉಳಿದದ್ದು ಯಾವುದೂ ಸಿನಿಮಾ ಮಾಡೋವಾಗ ಅಡ್ಡ ಬರಬಾರದು ಅಂತ. ಯಾಕೆಂದರೆ ಇದು ಕಲೆಕ್ಟಿವ್ ವರ್ಕ್. ಕ್ರಿಯೇಟಿವ್ ಡಿಸಿಷನ್, ಪ್ಲಸ್–ಮೈನಸ್, ವಿರುದ್ಧ ವಾದಗಳು ಎಲ್ಲವೂ ಇರುತ್ತೆ. 'ಉತ್ತಮ ವಿಲ್ಲನ್' ಈಗ ಆಲ್‌ಮೋಸ್ಟ್ ಮುಗಿದಿದೆ. ಅಷ್ಟು ದೊಡ್ಡ ಸಿನಿಮಾ, ಇಷ್ಟು ಕಡಿಮೆ ಅವಧಿಯಲ್ಲಿ ಮುಗಿದಿದೆ ಅಂದ್ರೆ ಅದಕ್ಕೆ ಮುಖ್ಯ ಕಾರಣ ನಾವು ಮೊದಲೇ ತೆಗೆದುಕೊಂಡ ಈ ನಿರ್ಧಾರ. ಹಾಗಾಗಿ ನಮ್ಮ ಸೆಟ್‌ನಲ್ಲಿ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳು ಬಂದಾಗಲೂ, ಅದು ಆಗೋದೇ ಬಹಳ ಅಪರೂಪಕ್ಕೆ– ಅದನ್ನು ದಾಟಿ ನಿಲ್ಲೋ ಲೆವೆಲ್ ಮತ್ತು ವಯಸ್ಸು ನಮ್ಮದು ಅಂತ ಅಂದ್ಕೊಂಡಿದ್ದೇವೆ.

ನಮ್ಮ ನಡುವೆ ಇನ್ನೊಂದು ಮುಖ್ಯ ವಿಷಯ ಏನಂದ್ರೆ, ಇಬ್ಬರೂ ಪರಸ್ಪರರನ್ನು ಮೆಚ್ಚಿಕೊಳ್ಳುವ ಗುಣ. ಅವರಿಗೆ 'ಪದ್ಮಭೂಷಣ' ಸಿಕ್ಕಿದಾಗ ನನಗೆ ಖುಷಿಯಾಗಿ ಅದನ್ನು ಅವರ ಹತ್ರ ಹೇಳ್ಕೊಳ್ಳೋದು– ನನಗೆ ಏನಾದ್ರೂ ಒಳ್ಳೇದು ಜೀವನದಲ್ಲಿ ಆದಾಗ ಆದ್ರೆ ಅವರು ಸಂತೋಷ ಪಡೋದು ಹೀಗೆ. ಫ್ರೆಂಡ್‌ಶಿಪ್‌ನಲ್ಲಿ ಬಹಳ ಮುಖ್ಯವಾದದ್ದು ಏನಂದ್ರೆ ಪರಸ್ಪರರ ನಡುವೆ ಅಸೂಯೆ ಇರಬಾರದು. ಒಬ್ಬರಿಗೊಬ್ಬರು ಪರಸ್ಪರರ ಗುಣಗಳನ್ನು ಹೊಗಳುವ ಮನಸ್ಥಿತಿ ಇರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಾವು ಇಬ್ಬರೂ ಒಬ್ಬರನ್ನೊಬ್ಬರು ನಂಬ್ತೀವಿ.

ಅಫ್‌ಕೋರ್ಸ್, ಸ್ವಭಾವತಃ ನಾನು ಯಾರಾದರೂ ಕುತೂಹಲಕಾರಿ ವಿಷಯಗಳನ್ನು ಹೇಳ್ತಾ ಇದ್ರೆ ಕೇಳಿಸಿಕೊಳ್ಳುತ್ತೇನೆ. ಅದು ನನಗೆ ಬಹಳ ಇಷ್ಟದ ಕೆಲಸ. ನಾನು ಒಳ್ಳೆಯ ಕೇಳುಗ. ಅದೂ ನಮ್ಮ ಫ್ರೆಂಡ್‌ಶಿಪ್ ಬೆಳೆಯೋದಕ್ಕೆ ಬಹಳ ಸಹಾಯ ಮಾಡಿದೆ ಅನ್ಸುತ್ತೆ. ಹೀಗಾಗಿ ನಾವು ಸುಮಾರು 20–25 ವರ್ಷಗಳಿಂದ ಪರಸ್ಪರರಿಗೆ ಅಂಟಿಕೊಂಡೇ ಇದ್ದೇವೆ– ಎಲ್ಲದರ ನಡುವೆಯೂ.

ಅದೇ ವೇಳೆ, ನೀವು ಏನ್ ಮಾಡ್ತೀರಿ– ನಿಮ್ಮ ಫ್ರೆಂಡ್ಸ್ ಜತೆ ಎಲ್ಲಾದರೂ ಹೊರಗೆ ಡಿನ್ನರ್‌ಗೆ ಹೋಗೋದು, ಪಾರ್ಟಿ ಮಾಡೋದು, ಅಲ್ಲಿ ನಮ್ಮದೇ ಆದ ಪರ್ಸನಲ್ ವಿಷಯಗಳನ್ನು, ವಯಸ್ಕರ ಜೋಕ್, ಪೋಲಿ ಜೋಕ್‌ಗಳನ್ನು, ಗಂಭೀರ ವಿಷಯಗಳನ್ನು ಹಂಚಿಕೊಳ್ಳೋದು– ಇವೆಲ್ಲವೂ ನಮ್ಮ ಫ್ರೆಂಡ್‌ಶಿಪ್‌ಅನ್ನು ಕೂಡಾ ಒಳ್ಳೆಯ ಸ್ಥಿತಿಯಲ್ಲಿಟ್ಟಿದೆ. ಈ ಫ್ರೆಂಡ್‌ಶಿಪ್‌ನಲ್ಲಿ ನಾನು ಸಾಕಷ್ಟು ವಿಷಯಗಳನ್ನು ಅವರಿಂದ ಕಲಿತಿದ್ದೇನೆ. ಅವರಲ್ಲಿ ಇರುವ ಹಲವು ಒಳ್ಳೆಯ ಗುಣಗಳು ನನ್ನಲ್ಲಿ ಇಲ್ಲ. ನನ್ನಲ್ಲಿ ಇರುವ ಕೆಲವು ಒಳ್ಳೆಯ ವಿಷಯಗಳು ಅವರಲ್ಲಿ ಇಲ್ಲ. ಈ ಗೆಳೆತನದಿಂದ ಪರಸ್ಪರರು ತಿಳಿದುಕೊಂಡಿರೋದು ಸಾಕಷ್ಟಿದೆ. ಮುಖ್ಯವಾಗಿ ಸಿನಿಮಾ, ಅದರ ಪರಿಪೂರ್ಣತೆ, ಅದರ ಗುಣಮಟ್ಟದ ತಿಳಿವಳಿಕೆ ಎಲ್ಲವನ್ನೂ ಕಮಲ್‌ಜೀಯಿಂದ ನಾನು ಸಾಕಷ್ಟು ಕಲೀತಿದ್ದೇನೆ.

ನಿಮಗೂ ಈ ಅನುಭವ ಆಗಿರುತ್ತೆ. ಯಾವುದೇ ಒಂದು ಗೆಳೆತನ ಮುಖ್ಯವಾಗಿ ಕ್ಲಿಕ್ ಆಗಲು ಮುಖ್ಯವಾದ ಕಾರಣ– ಪರಸ್ಪರರ ನಡುವೆ ಹಂಚಿಕೊಳ್ಳಲು ಸಮಾನ ಆಸಕ್ತಿಯ ವಿಷಯಗಳು ಇರಬೇಕು. ಅದರ ಬಗ್ಗೆ ಮಾತುಕತೆ ಆಡಲು ಆಗಬೇಕು. ಅದು ಒಂದು ಮುಖ್ಯವಾದ ಅಂಶ.

ಇನ್ನೊಂದು, ಅವರದ್ದೇ ಆದ ಸ್ಪೇಸ್ ಅನ್ನು ಗೌರವಿಸೋದನ್ನು ನಾನು ಇಷ್ಟ ಪಡ್ತೇನೆ. ಈಗ ಮುಖ್ಯವಾಗಿ ನನ್ನ ಇಷ್ಟು ವರ್ಷಗಳ ಸ್ನೇಹದಲ್ಲಿ ಕಮಲ್ ಅವರ ವೈಯಕ್ತಿಕ ಜೀವನದ ವಿಷಯಗಳು, ವಿವಾದಗಳು! ಅವರ ಜತೆಗೆ ಮೊದಲು ಸಾರಿಕಾ ಮೇಡಂ ಇದ್ರು, ಈಗ ಗೌತಮಿ ಮೇಡಂ ಇದ್ದಾರೆ. ಯಾರೇ ಇದ್ರೂ ಅವರ ಪರ್ಸನಲ್ ವಿಷಯಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲು ನಾನು ಹೋಗಿಲ್ಲ. ನಾನುಂಟು, ನನ್ನ ಫ್ರೆಂಡ್ ಉಂಟು. ವೈಯಕ್ತಿಕ ವಿಷಯಗಳನ್ನು ತುಂಬಾ ಕೆಣಕಲು ಹೋಗಲ್ಲ. ನಮ್ಮ ಇಂಟ್ರೆಸ್ಟ್ ಇರೋದು ಬೇರೆ ವಿಷಯಗಳಲ್ಲಿ. ನಮ್ಮ ಸಿನಿಮಾ, ನಮ್ಮ ಐಡಿಯಾಲಜಿ, ಪುಸ್ತಕಗಳ ಬಗ್ಗೆ. ಎಷ್ಟೋ ವಿಷಯಗಳಲ್ಲಿ ನೀವು ನಂಬುವಂತಹದ್ದನ್ನು ನಿಮ್ಮ ಫ್ರೆಂಡ್ ನಂಬಲಿಕ್ಕಿಲ್ಲ. ಆದರೂ ಗೆಳೆಯರ ನಡುವೆ ಒಂದು ಸಮಾನ ನೆಲೆ ಇರುತ್ತೆ. ಹಂಚಿಕೊಳ್ಳುವ ಆಸಕ್ತಿಯ ವಿಷಯಗಳು, ಗೆಳೆತನವನ್ನು ಉಳಿಸಿ ಬೆಳೆಸುತ್ತದೆ. ನಮ್ಮದು ಸಿನಿಮಾ ಕುರಿತ ಮೋಹ. ಕ್ವಾಲಿಟಿ ಬಗ್ಗೆ ಇನ್ನೊವೇಶನ್ ಬಗ್ಗೆ ಇರುವ ಮೋಹ. ಹೊಸ ವಿಷಯಗಳನ್ನು ಟ್ರೈ ಮಾಡಬೇಕು ಎಂಬ ಹುಡುಕಾಟ ಇಬ್ಬರಲ್ಲೂ ಇದೆ. ಅದೂ ನಮ್ಮ ಗೆಳೆತನವನ್ನು ಗಟ್ಟಿಯಾಗಿ ಉಳಿಸಿದೆ. ಅದು ಈಗಲೂ ನಡೆದೇ ಇದೆ. ಹ್ಯಾಪೀ ಫ್ರೆಂಡ್‌ಶಿಪ್ ಡೇ.